ಒಂದ ಗೇಣು ಜಾಗಾ ಇಲ್ಲ. ನಿಮ್ಮನಿಗೆ ಇರೂದು ಆದ ಒಂದು ಗೋಪಾಲ್ ಬೇಡೂ ತಂಬಿಗಿ. ನಾ ಇದ್ದಿನಂತ ಹೊಟ್ಟಿ ತುಂಬ ಊಟಾ ಕಂಡಿರಿ. ಸುಬ್ಬಿನ ನೀ ಹೊರಗ ಕೊಟ್ರು ದುಡ್ಡಿಲ್ದ ಯಾರ ಮಾಡ್ಕೋತಾರ.

ಮಾಡ್ಕೊಳಿಕ್ಕೆ ಮುಂದೆ ಬಂದ್ರು, ನಾಕ ಹಡದು ಹೇಣ್ತಿ ಸತ್ತ ಗಂಡಂದ್ರ ಬರಬೇಕು. ಮಾಡ್ಕೊಂಡವರು ನಿಮ್ಮನ್ಯಾಕ ಕೇಳ್ತಾರ... ವಿಚಾರ ಮಾಡೂ. ಸುಬ್ಬಿಗೆ ಹೊಲಾ ಹಚ್ತೇನಿ... ನಿನ್ನ ಜೀವಮಾನ ಇರೂತನ್ಕ ನೋಡ್ಕೋತೀನಿ.'

ಬಂಡೆಪ್ಪ ಹೇಳಿದ ಸಮಯಸಾಧಕ ಮಾತುಗಳನ್ನು ಅಚ್ಚಕ್ಕ ತಳ್ಳಿ ಬಿಡುವಂತಿಲ್ಲ– ಈ ಯೋಚನೆ ಬಿಟ್ಟರೆ ತಾವು ಬದುಕಗೇಡಿಯಾಗುತ್ತೇವೆ. ತಾವು ಇದ್ದದು ಬಂಡೆಪ್ಪನ ಕೃಪೆಯ ನೆರಳಲ್ಲಿ. ಅಕಸ್ಮಾತ್ ಬಂಡೆಪ್ಪ ನಾಳೆ ಬೇರೆ ಮದುವೆಯಾದರೆ ತಮ್ಮನ್ನು ಕೇಳುವವರ್ಯಾರು. ಹೊರ ಸಂಬಂಧ ಹುಡುಗಿ. ತಮ್ಮನ್ಯಾಕೆ ಕೇಳುತ್ತಾಳೆ. ಇದೇ ಹಂತದಲ್ಲಿಯೇ ಅಚ್ಚಕ್ಕ ಭರವಸೆ ಕೊಟ್ಟುಬಿಟ್ಟಳು.

'ಬಂಡೆಪ್ಪ ನೀ ಹೇಳೂದು ವಾಜಮಿ ಆದ. ಆದ್ರ ಹಿಂಗಂತ ಹೇಳಿದ್ರ ಸುಬ್ಬಿ ಒಪ್ಪಂಗಿಲ್ಲ... ನೀ ಬಾಣಗದಿನ್ನಿಗೆ ಹೋಗಿ ಎಲ್ಲಾ ತಯಾರ ಮಾಡಿಸು– ನಾಳಿನ ಹುಣ್ಣಿಮಿ ನಾ ಆಕಿನ್ನ ಕರ್ಕೊಂಡು ಬರ್ತೀನಿ. ಮದುವಿ ಮುಗಿಸಿಬಿಡೋಣ. ಗುಡ್ಯಾಗ ಅಕ್ಕಿಕಾಳ ಹಾಕ್ಕೊಂಡು ಬಂದ್ರಾತು.'

ಅಚ್ಚಕ್ಕ ಯಾವ ಆಂತರಿಕ ವೇದನೆಯಿಲ್ಲದೆ ತುಮುಲವಿಲ್ಲದೆ ಹೇಳಿದ ಮಾತುಗಳಿವು. ಅಚ್ಚಕ್ಕ ಯಾರಿಗೆ ಹೆದರಬೇಕಿತ್ತು. ಮಾಡಿಕೊಂಡ ಗಂಡನಿಗೆ ಅಂಜಿ ನಡೆದವಳಲ್ಲ. ಊರಿನ ಜನ ಏನನ್ನುತ್ತದೆ ಎನ್ನುವ ಉಸಾಬರಿಯಾದೂ ಅಚ್ಚಕ್ಕನಿಗೆಲ್ಲಿದೆ? ಅಂದರೆ ನಾಲ್ಕು ಮಾತು ಅನ್ನುತ್ತಾರೆ ಅಷ್ಟೆ ಎನ್ನುವ ಎದೆಗಾರಿಕೆಯಿದೆ.

'ಹಂಗ ಆಗಲಿ, ಹಂಗ ಆಗಲಿ' ಎನ್ನುತ್ತ ಬಂಡೆಪ್ಪ ಪಡಸಾಲೆಯ ಪಾವಟಿಗೆ ಇಳಿದು ಅಂಗಳ ದಾಟಿದ. ಬರುವಾಗ ಎದುರಾದ ಸುಬ್ಬಿಯನ್ನ ನೋಡಿ ದೇಶಾವರಿ ನಕ್ಕ. ಧೋತರದ ಕಚ್ಚಿ ತೀಡಿಕೊಳ್ಳುತ್ತ ಕೈಬೀಸಿಕೊಂಡು ಹೊರಟೆಹೋದರೂ ಅಚ್ಚಕ್ಕನ ಎದೆ ಭಾರ ಮಾತ್ರ ಕಡಿಮೆಯಾಗಿತ್ತು. 'ಸುಬ್ಬಿ ನಸೀಬ ಚಲೋ ಆದ ಬಂಡೆಪ್ಪ ತಾನಾಗೇ ಮಾಡ್ಕೋತಿನಿ ಅಂದಾನ, ಆಸ್ತಿ ಅದ. ಮಕ್ಕಳಾಗೊ ವಯಸ್ಸದ. ಸುಬ್ಬಿ ಸಣ್ಣಾಕೆ ಆದ್ರ ಏನಾತು. ನಾಳೆ ಎರಡ ಮಕ್ಳ ಆದ್ರ ತಾನ ಮುದುಕಿ ಆಗ್ತಾಳ. ಆಕೆ ಹೆಸರ್ಗೆ ಹತ್ತು ಕೂರ್ಗಿ ಹೊಲಾಬರ್ತದ. ಸಾಯೂತನ್ಕ ನನ್ನ ಜೀವಮಾನಕ್ಕೆ ಧಕ್ಕೆ ಇಲ್ಲ' ಈ ವಿಚಾರಗಳ ತೃಪ್ತತೆಯಲ್ಲಿ ಅಚ್ಚಕ್ಕ ನಿರಾತಂಕವಾಗಿದ್ದಳು. ಮುಂದಿನ ಕಾರ್ತಿಕದ ಹುಣ್ಣಿಮೆಯಲ್ಲೆ ಸುಬ್ಬಿಯನ್ನು ಕರೆದುಕೊಂಡು ಬಾಣಗದಿನ್ನಿಗೆ ಹೊರಟಳು. ಸುಬ್ಬಿಗೆ ಹಿಂದು–ಮುಂದಿನ ವಿಚಾರ ಗೊತ್ತಿಲ್ಲ. ಅಚ್ಚಕ್ಕ 'ಬಂಡೂಮಾವಗ ಆರಾಮ ಇಲ್ಲಂತ ಹೇಳಿ ಕಳಿಸ್ಯಾನ ನಡಿ ಸುಬ್ಬಿ' ಎಂದಿದ್ದಳು.

ಆದರೆ ಮುಂದೆ ಒಂದು ಗಂಟೆಯಲ್ಲಿ ಬಾಣಗದಿನ್ನಿ ತಲುಪಿ, ಬಂಡೂಮಾಮನ ಮನೆಯ ತಳಿರು ತೋರಣ ಕಂಡು 'ಅವ್ವಾ ಬಂಡೂಮಾವನ ಮನ್ಯಾಗ ಏನದ?' ಎಂದಿದ್ದಳು.

'ಏನಿಲ್ಲ ಬಾರ... ಮೊನ್ನಿ ಜಾತ್ರ್ಯಾಗ ಕಟ್ಟಿದ್ದ ಇರಬೇಕು' ಎಂದು ಅಚ್ಚಕ್ಕ ಒಳಹೋದಳು. ಹೊಸ ಧೋತರ ರೇಶಿಮೆ ಅಂಗಿ. ಹಣೆಗೆ ಕುಂಕುಮ ಹಚ್ಚಿಕೊಂಡು ಹೊರಗೆ ಬಂದ ಬಂಡೆಪ್ಪ.

'ಬರ್ರಿ... ಬರ್ರಿ... ಬಾ ಸುಬ್ಬಿ ಬಾ' ಎಂದು ಕರೆದೊಯ್ದ. ಅಚ್ಚಕ್ಕ ಬೇವೂರಿನಿಂದ ಬರುವಾಗಲೇ ಸುಬ್ಬಿಗೆ ಹೊಸಸೀರೆ ಉಡಿಸಿದ್ದಳು. ಈಗ ಮಣೆ ಮೇಲೆ ಬಂಡೆಪ್ಪನ ಹತ್ತಿರ